

ಬಾನು ಮುಷ್ತಾಕ್

# ಪ್ರಶಸ್ತಿಗಳ ಮೆರುಗು

## ಜಗದಗಲ ಹರಡಿದ ‘ಎದೆಯ ಹಣತೆ’ಯ ಪ್ರಭೆ



ದೀಪಾ ಭಾಸ್ತಿ

2025ರಲ್ಲಿ ಕನ್ನಡವನ್ನು ಜಗದಗಲ ಪಸರಿಸಿದ್ದು ಸಾಹಿತಿ ಬಾನು ಮುಷ್ತಾಕ್ ಮತ್ತು ಅನುವಾದಕಿ ದೀಪಾ ಭಾಸ್ತಿ. ಬಾನು ಅವರ ಸಣ್ಣ ಕಥಾ ಸಂಕಲನ ‘ಎದೆಯ ಹಣತೆ’ಯ ಇಂಗ್ಲಿಷ್ ಅನುವಾದ ‘ಹಾರ್ಟ್ ಲ್ಯಾಂಪ್’ 2025ನೇ ಸಾಲಿನ ಇಂಟರ್‌ನ್ಯಾಷನಲ್ ಬುಕರ್ ಪ್ರಶಸ್ತಿಗೆ ಆಯ್ಕೆಯಾಗುವುದರೊಂದಿಗೆ ಕನ್ನಡದ ಸಾಹಿತ್ಯವು ಇಡೀ ಜಗತ್ತಿಗೆ ವ್ಯಾಪಿಸಿತು. ಕಥೆಗಳನ್ನು ಅನುವಾದ ಮಾಡಿದವರು ಕನ್ನಡದವರೇ ಆದ ದೀಪಾ ಭಾಸ್ತಿ. ಮೇ 21ರಂದು ಈ ಪ್ರಶಸ್ತಿಯನ್ನು ಘೋಷಿಸಲಾಯಿತು. ಇದು ಕನ್ನಡಕ್ಕೆ ದಕ್ಕಿದ ಮೊದಲ ಅಂತರರಾಷ್ಟ್ರೀಯ ಬುಕರ್ ಪ್ರಶಸ್ತಿಯೂ ಹೌದು.

### ನವ ‘ಪದ್ಮ’ಗಳು

ಈ ವರ್ಷ ರಾಜ್ಯದ ಒಂಬತ್ತು ಮಂದಿ ಸಾಧಕರು ‘ಪದ್ಮ’ ಪುರಸ್ಕಾರದ ಗೌರವವನ್ನು ಮುಡಿಗೇರಿಸಿಕೊಂಡರು. ಖ್ಯಾತ ಪಿಟೀಲು ವಾದಕ ಎಲ್. ಸುಬ್ರಮಣಿಯನ್ (ಕಲಾ ಕ್ಷೇತ್ರ) ಅವರು ಪದ್ಮ ವಿಭೂಷಣ, ಪತ್ರಕರ್ತ ಸೂರ್ಯಪ್ರಕಾಶ್ ಮತ್ತು ನಟ ಅನಂತನಾಗ್ ಪದ್ಮಭೂಷಣ (ಸಾಹಿತ್ಯ, ಶಿಕ್ಷಣ, ಪತ್ರಿಕೋದ್ಯಮ, ಕಲಾ ಕ್ಷೇತ್ರ) , ತೊಗಲು ಬೊಂಬೆಯಾಟದ ಹಿರಿಯ ಕಲಾವಿದೆ ಭೀಮವ್ವ ದೊಡ್ಡಬಾಳಪ್ಪ ಶಿಳ್ಳೇಕ್ಯಾತರ, ಸಮರ ಕಲೆ ಪರಿಣತ ಹಾಸನ್ ರಘು, ಸಂಗೀತ ನಿರ್ದೇಶಕ ರಿಕಿ ಗ್ಯಾನ್ ಕೇಜ್, ಜಾನಪದ ಗಾಯಕ ವೆಂಕಪ್ಪ ಅಂಭಾಜಿ ಸುಗತೇಕರ (ಕಲಾ ಕ್ಷೇತ್ರ), ಉದ್ಯಮಿ ಪ್ರಶಾಂತ್ ಪ್ರಕಾಶ್ (ವ್ಯಾಪಾರ ಮತ್ತು ಉದ್ಯಮ ಕ್ಷೇತ್ರ), ಕ್ಯಾನ್ಸರ್ ರೋಗ ಚಿಕಿತ್ಸಾ ತಜ್ಞೆ ವಿಜಯಲಕ್ಷ್ಮಿ ದೇಶಮಾನೆ (ವೈದ್ಯಕೀಯ ಕ್ಷೇತ್ರ) ‘ಪದ್ಮಶ್ರೀ’ ಪುರಸ್ಕಾರಕ್ಕೆ ಭಾಜನರಾದರು.

# ಮಿಗ್-21ಗೆ ವಿದಾಯ

ಆರು ದಶಕಗಳ ಕಾಲ ಭಾರತೀಯ ವಾಯು ಸೇನೆಯಲ್ಲಿ ಕರ್ತವ್ಯ ನಿರ್ವಹಿಸಿದ ಸೋವಿಯತ್ ಒಕ್ಕೂಟ ನಿರ್ಮಿತ ಮಿಗ್–21 ಯುದ್ಧವಿಮಾನಕ್ಕೆ ವಾಯುಪಡೆಯು ಈ ವರ್ಷ ವಿದಾಯ ಹೇಳಿತು. ಆಗಸ್ಟ್ 25ರಂದು ರಾಜಸ್ಥಾನದ ಬಿಕಾನೇರ್‌ನ ನಾಲ್ ವಾಯುನೆಲೆಯಲ್ಲಿ ಅದು ಕೊನೆಯ ಬಾರಿಗೆ ಹಾರಾಟ ನಡೆಸಿತು. ವಾಯುಪಡೆಯು ಸೆಪ್ಟೆಂಬರ್ 26ರಂದು ಚಂಡೀಗಢದ ವಾಯುಪಡೆಯ ನಿಲ್ದಾಣದಲ್ಲಿ ಸಮಾರಂಭವನ್ನು ಆಯೋಜಿಸಿ ಮಿಗ್–21ಗೆ ಅಧಿಕೃತವಾಗಿ ವಿದಾಯ ಹೇಳಿತು.

### ತೇಜಸ್ ಪತನ

ಸ್ವದೇಶಿ ತಂತ್ರಜ್ಞಾನದಲ್ಲಿ ನಿರ್ಮಿಸಲಾಗಿರುವ, ಭವಿಷ್ಯದಲ್ಲಿ ಭಾರತದ ವಾಯುಪಡೆಗೆ ಶಕ್ತಿ ತುಂಬಲಿದೆ ಎಂದು ನಂಬಲಾದ ತೇಜಸ್ ಹಗುರ ಯುದ್ಧವಿಮಾನವು ದುಬೈನಲ್ಲಿ ನಡೆದ ಏರ್ ಶೋನ ಭಾಗವಾಗಿ ನವೆಂಬರ್ 21ರಂದು ವೈಮಾನಿಕ ಕಸರತ್ತು ನಡೆಸುತ್ತಿದ್ದ ವೇಳೆ ಏಕಾಏಕಿ ನೆಲಕ್ಕೆ ಅಪ್ಪಳಿಸಿತು. ಪೈಲಟ್ ಮೃತಪಟ್ಟರು.



ಮಿಗ್–21 ಯುದ್ಧವಿಮಾನ

# ಪೋಪ್ ಫ್ರಾನ್ಸಿಸ್ ನಿಧನ

- ವಿನಮ್ರ ವ್ಯಕ್ತಿತ್ವ, ಬಡವರ ಬಗ್ಗೆ ಅಪಾರ ಕಾಳಜಿ ಹೊಂದಿದ್ದ ಪೋಪ್ ಫ್ರಾನ್ಸಿಸ್ (88) ಅವರು ಏಪ್ರಿಲ್ 21ರಂದು ನಿಧನರಾದರು.

ಅಮೆರಿಕದಲ್ಲಿ ಜನಿಸಿದ ರಾಬರ್ಟ್ ಫ್ರಾನ್ಸಿಸ್ ಪ್ರಿವೋಸ್ಟ್ ಅವರು ಕ್ಯಾಥೊಲಿಕ್ ಚರ್ಚ್‌ನ ಪರಮೋಚ್ಚ ಧಾರ್ಮಿಕ ಗುರುವಾಗಿ ಮೇ 8ರಂದು ಆಯ್ಕೆಯಾದರು. ಅವರಿಗೆ ಪೋಪ್ ಲಿಯೊ–14 ಎಂದು ಮರುನಾಮಕರಣ ಮಾಡಲಾಯಿತು.



ಪೋಪ್ ಫ್ರಾನ್ಸಿಸ್



# ಭಾರತ-ಅಮೆರಿಕ ಹಳಸಿದ ಸಂಬಂಧ

ಡೊನಾಲ್ಡ್ ಟ್ರಂಪ್ ಅವರು ಎರಡನೇ ಬಾರಿ ಅಮೆರಿಕದ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ನಂತರ ಭಾರತ ಮತ್ತು ಅಮೆರಿಕದ ನಡುವಿನ ಸಂಬಂಧ ಹಳಸಿತು. ಭಾರತದಿಂದ ರಫ್ತಾಗುವ ವಸ್ತುಗಳ ಮೇಲೆ ಶೇ. 50ರಷ್ಟು ಸುಂಕ ಹೇರಿಕೆ, ಎಚ್1ಬಿ ವೀಸಾದ ಮೇಲೆ ನಿರ್ಬಂಧದಂತಹ ಕ್ರಮಗಳು ಭಾರತಕ್ಕೆ ಪಥ್ಯವಾಗಿಲ್ಲ. ಭಾರತ–ಪಾಕ್ ಸೇನಾ ಸಂಘರ್ಷವನ್ನು ತಾನೇ ನಿಲ್ಲಿಸಿದ್ದಾಗಿ ಟ್ರಂಪ್ ಹೇಳುತ್ತಿರುವುದೂ ಭಾರತದ ಅಸಮಾಧಾನಕ್ಕೆ ಕಾರಣವಾಗಿದೆ.

